ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/131/2020–21 ದಿನಾಂಕ: 12.10.2020.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

***

ದಿನಾಂಕ 30.09.2020 ರಂದು ಪೂರ್ವಾಹ್ನ 10.30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಯನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 12/10/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/131 /2020-21** **ದಿನಾಂಕ: 12.10.2020.**

ದಿನಾಂಕ 30.09.2020 ರಂದು ಪೂರ್ವಾಹ್ನ 10.30 ಗಂಟೆಗೆ, ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜ಼ಾಫೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ. ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್, | ಸದಸ್ಯರು |
| 5. | ಡಾ. ಬಿ. ಎ. ಅನುರಾಧಾ, | ಸದಸ್ಯರು |
| 6. | ಡಾ. ಆರ್. ಪಾರ್ವತಿ, | ಸದಸ್ಯರು |
| 7. | ಡಾ. ಇ. ಬಿ. ರಾಜೇಶ್, | ಸದಸ್ಯರು |
| 8. | ಪ್ರೊ. ಡಿ. ಜಿ. ಶ್ರೀನಿವಾಸಮೂರ್ತಿ, | ಸದಸ್ಯರು |
| 9. | ಶ್ರೀ. ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ. ಹೆಚ್. ಎನ್. ಹರಿಪ್ರಸಾದ | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 12. | ಶ್ರೀ. ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 13. | ಡಾ. ಆರ್. ಕೆ. ಚಂದ್ರನಾಥ್ | ಸದಸ್ಯರು |
| 14. | ಡಾ. ವಿ. ಆರ್. ದೇವರಾಜು | ಸದಸ್ಯರು |
| 15. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಡಾ. ವಿ. ಶಿವರಾಂ,<br>ಕುಲಸಚಿವರು, | ಸದಸ್ಯ<br>ಕಾರ್ಯದರ್ಶಿಗಳು |

ಸದಸ್ಯರನ್ನು ಇಂದಿನ ಸಭೆಗೆ ಆಹ್ವಾನಿಸಿ ಕುಲಪತಿಗಳು ಸ್ವಲ್ಪ ತಡವಾಗಿ ಆಗಮಿಸುವರೆಂದು ಸಭೆಯ ಗಮನಕ್ಕೆ ಕುಲಸಚಿವರು ತಿಳಿಸಿದಾಗ, ಸದಸ್ಯರ ಸೂಚನೆಯಂತೆ ಸಭೆಯ ತಾತ್ಕಾಲಿಕ ಅಧ್ಯಕ್ಷತೆಯನ್ನು, ಹಿರಿಯ ಡೀನ್ ಪ್ರೊ. ಎಂ. ಪಾಂಡುರಂಗಪ್ಪನವರು, ವಹಿಸಿದರು ತದನಂತರ ಕುಲಪತಿಗಳು ಆಗಮಿಸಿ ಸಭೆಯ ಅಧ್ಯಕ್ಷತೆಯನ್ನು ಮುಂದುವರೆಸಿದರು.

12/10/2020

I. ಸನ್ಮಾನ್ಯ ಸದಸ್ಯರಾದ ಶ್ರೀ. ಹೆಚ್. ಎನ್. ಹರಿಪ್ರಸಾದ, ಶ್ರೀ ಕರಣ್‌ಕುಮಾರ್ ಹಾಗೂ ಡಾ. ಆರ್ ಪಾರ್ವತಿ ಮತ್ತು ಶ್ರೀಮತಿ ಜ್ಯೋತಿವಿಜಯ್ ರವರು ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ಪ್ರೊ.ಮುನಿನಾರಾಯಣಪ್ಪರವರ ವಿಷಯವನ್ನು ಪ್ರಸ್ತಾಪಿಸಿದಾಗ, ಅದರ ಬಗ್ಗೆ ದಾಖಲಿಸಿರುವ ತೀರ್ಮಾನವನ್ನು ಗಮನಿಸಿ, "ಅವರಿಗೆ ಸೂಚನಾ ಪತ್ರವನ್ನು ನೀಡಿ, ನಂತರ ಸಿಂಡಿಕೇಟ್ ಗಮನಕ್ಕೆ ಮಂಡಿಸಲಾಗುವುದು" ಎಂದು ಪರಿಷ್ಕರಿಸಲಾಗುವುದೆಂದು ತಿಳಿಸಲಾಯಿತು.

ಇಂದಿನ ಸಭೆಯ ಕಾರ್ಯಸೂಚಿಯಾದ ವಿಶ್ವವಿದ್ಯಾಲಯದ ಕರಡು ನಿಯಮಾವಳಿಗಳನ್ನು ಪರಿಗಣಿಸಲು ತೆಗೆದುಕೊಳ್ಳಲಾಯಿತು.

1. ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಕೆಳಕಂಡ ಕರಡು ಪರಿನಿಯಮಗಳನ್ನು (Statutes) ಗಳನ್ನು ಪರಿಗಣಿಸುವ ಕುರಿತು.

**1.1 STATUTE RELATING TO APPOINTMENT AND PROMOTION OF TEACHERS AND OTHER ACADEMIC STAFF AND FOR IMPLEMENTATION OF REVISED UGC PAY SCALES IN BENGALURU CITY UNIVERSITY- 2020.**

**1.2 STATUTE RELATING TO THE MANNER OF CONDUCTING INTERVIEW FOR APPOINTMENT AND PROMOTION OF TEACHERS AND OTHER ACADEMIC STAFF IN THE BENGALURU CITY UNIVERSITY, BENGALURU, 2020.**

**1.3 STATUTE GOVERNING ESTABLISHMENT OF NEW POST-GRADUATE DEPARTMENTS OF STUDIES, INSTITUTION OF TEACHING POSTS FOR THE NEW AND EXISTING POST-GRADUATE DEPARTMENTS OF STUDIES IN BENGALURU CITY UNIVERSITY, 2020**

**1.4 STATUTE GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY, 2020.**

**1.5 STATUTES GOVERNING THE AFFILIATION OF COLLEGES/ INSTITUTIONS UNDER THE JURISDICTION OF BENGALURU CITY UNIVERSITY, 2020.**

**1.6 STATUTE GOVERNING SENIORITY OF TEACHERS OF BENGALURU CENTRAL UNIVERSITY, 2020.**

**1.7 STATUTES GOVERNING CONSTITUTION, MEETINGS, POWERS AND FUNCTIONS OF VARIOUS AUTHORITIES OF THE BENGALURU CITY UNIVERSITY, 2020.**

**1.8 STATUTE GOVERNING HOLDING OF CONVOCATIONS FOR CONFERRING DEGREES, 2020**

**1.9 STATUTE GOVERNING THE INSTITUTION OF ENDOWMENTS FOR AWARD OF GOLD MEDALS, PRIZES, FELLOWSHIPS, SCHOLARSHIPS ENDOWMENT LECTURES AND ACADEMIC CHAIRS, 2020.**

**1.10 STATUTE GOVERNING AWARD OF HONORARY DEGREES OR ACADEMIC DISTINCTIONS BY BENGALURU CITY UNIVERSITY AT THE ANNUAL CONVOCATIONS, 2020.**

**1.11 STATUTES GOVERNING APPOINTMENT, POWERS, FUNCTIONS AND RESPONSIBILTIES OF THE OFFICERS OF THE UNIVERSITY, 2020,**

ಕರಡು ನಿಯಮಾವಳಿಗಳಲ್ಲಿ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ" ಎಲ್ಲೆಲ್ಲಿ ಮುದ್ರಿತವಾಗಿದೆಯೋ ಅಲ್ಲಲ್ಲಿ "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಎಂಬ ಪದಗಳನ್ನು ಸಂಯೋಜನೆ (incorporate) ಮಾಡತಕ್ಕದ್ದು

**1.1) STATUTE RELATING TO APPOINTMENT AND PROMOTION OF TEACHERS AND OTHER ACADEMIC STAFF AND FOR IMPLEMENTATION OF REVISED UGC PAY SCALES IN BENGALURU CITY UNIVERSITY- 2020.**

a) ಪುಟ ಸಂಖ್ಯೆ-13, 4.1.I(C), ಪುಟ ಸಂಖ್ಯೆ-15, 4.2.I(C), ಪುಟ ಸಂಖ್ಯೆ-18, 4.3.I(C) ಪುಟ ಸಂಖ್ಯೆ-21, 4.4.I(C) (Age Limit for Appointment of Assistant Professor)

i. ಶ್ರೀ ಕರಣ್ ಕುಮಾರ್ ರವರು ದಿನಾಂಕ. 29.08.2020 ರ ಸಿಂಡಿಕೇಟ್ ತೀರ್ಮಾನದ ಪ್ರಕಾರ ಕರಡು ಪರಿನಿಯಮಾವಳಿಗಳನ್ನು ಪರಿಶೀಲಿಸಿ ವಿವರಗಳನ್ನು ಸಭೆಗೆ ವಿವರಿಸಿದರು. ವಯೋಮಿತಿಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಮಾತ್ರವೇ ಸೀಮಿತವಾಗಿರುವುದು. ಈ ಹುದ್ದೆಗೆ ಆಕಾಂಕ್ಷಿಗಳು ಅರ್ಜಿ ದಾಖಲಿಸಿದಾಗ ಅವರುಗಳಿಗೆ ಸಿಗಬಹುದಾದ ಮುಂಬಡ್ತಿಯ ಅವಕಾಶಗಳು, ವಿಶ್ವವಿದ್ಯಾನಿಲಯ ವಿಭಾಗಗಳ ಪ್ರಗತಿ ಮತ್ತು ಮುನ್ನಡೆ, ಸರ್ಕಾರದ ಕಾಲೇಜುಗಳಲ್ಲಿ ಬೋಧಕರಿಗೆ ವಿಧಿಸಿರುವ ವಯೋಮಿತಿಯ ಹಿನ್ನಲೆ, ಬೋಧಕರಿಗೆ ಸರ್ಕಾರದ ವತಿಯಿಂದ ನೀಡಲಾಗುವ ಸಂಪನ್ಮೂಲದ ಹಿನ್ನೆಲೆ ಹಾಗೂ ಕರಡು ಸಮಿತಿಯ ಒಟ್ಟಾರೆ ಸದಸ್ಯರ ಅಭಿಮತ / ನಿಲುವನ್ನು ಗಮನಿಸಿ ವಯೋಮಿತಿಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಿಗದಿಗೊಳಿಸಿರುವ ಅಂಶದ ಸವಿಸ್ತಾರದ ಚರ್ಚೆ ನಡೆದ ಹಿನ್ನೆಲೆಯಲ್ಲಿ ಮಂಡಿಸಿ ಸದರಿ ಪ್ರಸ್ತಾಪವನ್ನು ಯಾವುದೇ ತಿದ್ದುಪಡಿ ಮಾಡದೆ ಅನುಮೋದಿಸಬೇಕೆಂದು ಕೋರಿದರು.

ii. ಡಾ. ಆರ್.ಕೆ ಚಂದ್ರನಾಥ್ ರವರು ಚರ್ಚೆಯಲ್ಲಿ ಭಾಗವಹಿಸುತ್ತಾ ವಯೋಮಿತಿ ನಮೂದಿಸಿರುವ ಹಿನ್ನೆಲೆಯನ್ನು ಪ್ರಸ್ತಾಪಿಸಿ, ತಿದ್ದುಪಡಿಗಳಿಲ್ಲದೆ ಅನುಮೋದಿಸಬೇಕೆಂದು ಕೋರಿದರು.

iii. ಡಾ. ಆರ್. ಪಾರ್ವತಿ ರವರು ಚರ್ಚೆಯಲ್ಲಿ ಭಾಗವಹಿಸುತ್ತಾ ಯುಜಿಸಿ ನಿಯಮಾವಳಿಗಳು, ಬೋಧನಾ ಕಾರ್ಯಗಳಿಗೆ "ಪ್ರತಿಭೆ"ಯನ್ನು (Talent) ಆಕರ್ಷಿಸಲು ಮತ್ತು ಸಂಶೋಧನಾ ಕಾರ್ಯಗಳಿಗೆ ಒತ್ತುಕೊಡುವ ಉದ್ದೇಶಗಳಿಂದಾಗಿ ವಯೋಮಿತಿಯ ವಿಷಯವನ್ನು ತೆಗೆದುಹಾಕಬೇಕೆಂದು ಕೋರಿದರು.

iv. ಶ್ರೀ ಟಿ. ಹೆಚ್. ಶ್ರೀನಿವಾಸಯ್ಯರವರು ಈ ಅಂಶದ ಬಗ್ಗೆ ನಡೆದಂತಹ ಚರ್ಚೆ ಹಾಗೂ ಹಿನ್ನೆಲೆಯನ್ನು ಗಮಿನಿಸಿ ತಿದ್ದುಪಡಿಗಳಿಲ್ಲದೆ ಒಪ್ಪಬೇಕೆಂದು ಸೂಚಿಸಿದರು.

v. ಡಾ. ವಿ. ಆರ್. ದೇವರಾಜ್ ರವರು ಮಾತನಾಡುತ್ತಾ ಕೇಂದ್ರಿಯ ಸಂಸ್ಥೆಗಳಲ್ಲಿ ಇರುವಂತಹ ಅವಕಾಶಗಳು ಮತ್ತು ಹಾಲಿ ಶಿಕ್ಷಣ ಕೇತ್ರದಲ್ಲಿ ಪಿ.ಹೆಚ್.ಡಿ ಪದವಿಗಳನ್ನು ಪಡೆದಿರುವ ಹೆಚ್ಚಿನ ಆಕಾಂಕ್ಷಿಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿ, ಸೂಚಿಸಿರುವ ವಯೋಮಿತಿಯ ನಿರ್ಬಂಧವನ್ನು ತೆಗೆದುಹಾಕುವಂತೆ ಸೂಚಿಸಿದರು.

vi. ಶ್ರೀಮತಿ ಜ್ಯೋತಿವಿಜಯ್‌ರವರು ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾ ರಾಷ್ಟ್ರೀಯ ಶಿಕ್ಷಣ ನೀತಿಯ (National Education Policy) ಅನುಷ್ಠಾನವು ಸನ್ನಿಹಿತವಾಗಿದ್ದು ಅದರ ಅನ್ವಯ, ಸದರಿ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಸಭೆಯನ್ನು ಆಗ್ರಹಿಸಿದರು.

vii. ಡಾ. ಅರವಿಂದ್ ರವರು ಸದರಿ ವಿಷಯದ ಬಗ್ಗೆ ಕರಡು ಸಮಿತಿಯಲ್ಲಿ ನಡೆದಂತಹ ಸುಧೀರ್ಘ ಚರ್ಚೆಯ ಅಂಶಗಳನ್ನು ಸಭೆಯ ಗಮನಕ್ಕೆ ಮಂಡಿಸಿದರು. ಸದರಿ ವಯೋಮಿತಿ ಸೇರಿಸುವ ಉದ್ದೇಶಗಳು ಹಾಗೂ ಬಾದಕಗಳ ಬಗ್ಗೆ ನಡೆಸಿದ ವಿಷಯಗಳನ್ನು ಗಮನಿಸುತ್ತಾ ಸರ್ಕಾರಕ್ಕೆ ಕಾನೂನಿನಲ್ಲಿ ಇರುವ ಅವಕಾಶಗಳನ್ನು ಪರಿಗಣಿಸಿ ವಯೋಮಿತಿಯ ವಿಷಯವನ್ನು ತಿದ್ದುಪಡಿ ಮಾಡದೆ ಉಳಿಸಿಕೊಳ್ಳಲು ಸಭೆಯನ್ನು ಕೋರಿದರು.

viii. ಡಾ. ರಾಜೇಶ್‌ರವರು ಚರ್ಚೆಯಲ್ಲಿ ಭಾಗವಹಿಸುತ್ತಾ ಯುಜಿಸಿ ನಿಯಾಮಾವಳಿಗಳಲ್ಲಿ ಇಲ್ಲದಿರುವ ನಿರ್ಬಂಧಗಳನ್ನು ಗಮನಿಸಿ ಪ್ರಸ್ತಾಪಿತ ವಯೋಮಿತಿ ನಿರ್ಬಂಧಗಳನ್ನು ಕೈಬಿಡಬೇಕೆಂದು ಆಗ್ರಹಿಸಿದರು.

ix. ಶ್ರೀ ಸತೀಶ್ ರವರು ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾ ಯು.ಜಿ.ಸಿ ನಿಯಾಮಾವಳಿಗಳ ತರ್ಕಬದ್ಧ ನಿರ್ಧಾರದ (Rational Decision) ಹಿನ್ನೆಲೆಯಲ್ಲಿ ಸದರಿ ನಿರ್ಬಂಧವನ್ನು ತೆಗೆದುಹಾಕಬೇಕೆಂಬ ಸೂಚನೆಯನ್ನು ಮುಂದಿಟ್ಟರು.

x. ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡುತ್ತಾ ಕೈಗಾರಿಕ ಉದ್ಯಮದಿಂದ ಬೋಧಕ ವೃತ್ತಿಗಾಗಿ ಬಯಸುವ ಆಕಾಂಕ್ಷಿಗಳ ಅನುಭವದ ಅಗತ್ಯತೆ, ವಯೋಮಿತಿಯ ನಿರ್ಬಂಧಗಳ ತೊಡಕುಗಳು ಹಾಗೂ ನ್ಯಾಯಾಲಯದ ಪ್ರಶ್ನಿಸುವ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಮಾಡಬೇಕಾಗುವ ಅಗತ್ಯತೆಯನ್ನು ವಿವರಿಸಿದರು.

ಸಭೆಯ ಅಧ್ಯಕ್ಷರಾದ ಕುಲಪತಿಗಳು ಸದರಿ ಚರ್ಚೆಗೆ ಪ್ರತಿಕ್ರಯಿಸುತ್ತಾ, ಕೇಂದ್ರ ಸರ್ಕಾರ ನೂತನ ಶಿಕ್ಷಣ ನೀತಿ (National Education Policy) ಯನ್ನು ಇತ್ತೀಚೆಗೆ ಪ್ರಕಟಿಸಿದೆ. ಇದನ್ನು ರಾಷ್ಟ್ರಾದ್ಯಂತ

ಅನುಷ್ಠಾನಗೊಳಿಸಬೇಕಾಗುತ್ತದೆ. ಈ ನೀತಿಯಲ್ಲಿ, interdisciplinary approach ಸೇರಿ ಹಲವಾರು ನವೀನ ಅಂಶಗಳು ಅಡಕಗೊಂಡಿರುತ್ತವೆ ಇಂತಹ ಸಮಗ್ರ ನೀತಿಯನ್ನು ಅಳವಡಿಸಲು ವಿಶ್ವವಿದ್ಯಾಲಯದ ಧನ ಸಹಾಯ ಆಯೋಗವು ಕಾರ್ಯೋನ್ಮುಖವಾಗಿದೆ. ಸದರಿ ಹಿನ್ನೆಲೆಯಲ್ಲಿ ಯು.ಜಿ.ಸಿಯ ಮಾರ್ಗದರ್ಶಿ ಸೂಚನೆಗಳಿಗೆ ಅನುಗುಣವಾಗಿ, ವಿಶ್ವವಿದ್ಯಾಲಯದ ನಿಯಮಗಳು ಪೂರಕವಾಗಿರುವುದು ಸೂಕ್ತವೆಂಬ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಸದರಿ ಅಭಿಪ್ರಾಯಕ್ಕೆ ಸದಸ್ಯರಿಂದ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾದ್ದರಿಂದ ವಿಷಯವನ್ನು ಧ್ವನಿಮತಕ್ಕೆ ಹಾಕಲು ತೀರ್ಮಾನಿಸಲಾಯಿತು. ಅದರ ಅನುಸಾರ ವಯೋ ನಿರ್ಬಂಧ ಪರವಾಗಿ 07 ಮತಗಳು ಹಾಗೂ ಅದನ್ನು ತೆಗೆದುಹಾಕಲು 08 ಮತಗಳು ಸ್ವೀಕೃತವಾದುವು

ಸಿಂಡಿಕೇಟ್ ತೀರ್ಮಾನ:

**ಸಹಾಯಕ ಪ್ರಾಧ್ಯಾಪಕರುಗಳ ನೇರ ನೇಮಕಾತಿಗಾಗಿ ವಿಧಿಸಿರುವ ವಯೋನಿವೃತ್ತಿ ನಿಯಮಗಳನ್ನು ತೆಗೆದುಹಾಕಲು ತೀರ್ಮಾನಿಸಿ, ಪರಿನಿಯಮಗಳನ್ನು ಅನುಮೋದಿಸಲು ತೀರ್ಮಾನಿಸಲಾಯಿತು.**

b) IV. Senior Professor in the University, ಪುಟ ಸಂಖ್ಯೆ:27

| ಕ್ರಮ ಸಂಖ್ಯೆ | ಇರುವುದು | ಮಾರ್ಪಾಡಿತ ನಿಯಮ |
|---|---|---|
| a) ii) | An academician not below the rank of senior professor / with minimum 10 years experience who is the nominee of the Visitor / Chancellor wherever applicable | An academician not below the rank of senior professor / with minimum 10 years experience who is the nominee of the Vice-Chancellor wherever applicable |

ಸಿಂಡಿಕೇಟ್ ತೀರ್ಮಾನ:

**ಸೂಚಿಸಿದ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು.**

**1.2 STATUTE RELATING TO THE MANNER OF CONDUCTING INTERVIEW FOR APPOINTMENT AND PROMOTION OF TEACHERS AND OTHER ACADEMIC STAFF IN THE BENGALURU CITY UNIVERSITY, BENGALURU, 2020.**

<u>ಸಿಂಡಿಕೇಟ್ ತೀರ್ಮಾನ:</u>

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.

**1.3 STATUTE GOVERNING ESTABLISHMENT OF NEW POST-GRADUATE DEPARTMENTS OF STUDIES, INSTITUTION OF TEACHING POSTS FOR THE NEW AND EXISTING POST-GRADUATE DEPARTMENTS OF STUDIES IN BENGALURU CITY UNIVERSITY, 2020**

ಸದರಿ ನಿಯಮದ ಕಲಂ–7 ರಲ್ಲಿ ರಾಸಾಯನಶಾಸ್ತ್ರಕ್ಕೆ ಸಂಬಂಧಿಸಿದಂತೆ ಹುದ್ದೆಗಳ ವರ್ಗಾವಣೆಯ ಕುರಿತು ಪ್ರೊ. ಪಾಂಡುರಂಗಪ್ಪನವರ ಆಕ್ಷೇಪಣೆಗೆ ಕುಲಪತಿಗಳು ಸ್ಪಷ್ಟೀಕರಣ ನೀಡಿದರು.

<u>ಸಿಂಡಿಕೇಟ್ ತೀರ್ಮಾನ:</u>

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.

**1.4 STATUTE GOVERNING CADRE, RECRUITMENT AND PROMOTION OF NON TEACHING, TECHNICAL AND MINISTERIAL STAFF IN THE BENGALURU CITY UNIVERSITY, 2020.**

<u>ಸಿಂಡಿಕೇಟ್ ತೀರ್ಮಾನ:</u>

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.

## 1.5 STATUTES GOVERNING THE AFFILIATION OF COLLEGES/ INSTITUTIONS UNDER THE JURISDICTION OF BENGALURU CITY UNIVERSITY, 2020.

ಸದರಿ ನಿಯಮದ ಬಗ್ಗೆ ಹಲವಾರು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು ಸಂಯೋಜಿತ ಕಾಲೇಜುಗಳ ಅರ್ಜಿಗಳನ್ನು ಪರಿಗಣಿಸುವಾಗ ಎದುರಿಸುತ್ತಿರುವ ತೊಡಕುಗಳು, ವರದಿ ಅಪ್‌ಲೋಡ್ ಮಾಡುವಾಗ ಇರುವ ಸಮಸ್ಯೆಗಳು, ವಿಶ್ವವಿದ್ಯಾಲಯದ ಜವಾಬ್ದಾರಿಗಳು, ಕಾಲೇಜುಗಳು ವಿಶ್ವವಿದ್ಯಾಲಯಕ್ಕೆ ನೀಡಬೇಕಾದ ಜಂಟಿ ತೇವಣಿ (Joint Deposit) ಇತ್ಯಾದಿ ಅಂಶಗಳ ಬಗ್ಗೆ ಸಭೆಯ ಗಮನವನ್ನು ಸದಸ್ಯರು ಸೆಳೆದರು. ನಿಯಮ 10 ಕಾಲೇಜುಗಳ ಸ್ವಯಂಪ್ರೇರಿತ ಮುಚ್ಚುವಿಕೆ (Voluntary Closure of Colleges) ಬಗ್ಗೆ ಸದಸ್ಯರಾದ ಡಾ. ಇ. ಬಿ. ರಾಜೇಶ್ ರವರು ಮಾತನಾಡುತ್ತಾ ಒಂದು ವೇಳೆ ಸ್ಥಾಪಿತ ಕಾಲೇಜುಗಳು ತಮ್ಮಲ್ಲಿರುವ ಕೋರ್ಸು ಅಥವಾ ಕಾಲೇಜನ್ನು ಸ್ವಯಂ ಮುಚ್ಚಿದರೆ ವಿದ್ಯಾರ್ಥಿಗಳು ಎದುರಿಸಬೇಕಾದ ಸಮಸ್ಯೆಗಳು ಹಾಗೂ ಸರ್ಕಾರದಲ್ಲಿ ಇರುವ ನಿವಾರಣ ಅಂಶಗಳ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು.

ಚರ್ಚೆಗೆ ಪ್ರತಿಕ್ರಿಯಿಸಿದ ಕುಲಪತಿಗಳು ವಿವರಣೆ ನೀಡುತ್ತಾ ಜಂಟಿ ನಿಶ್ಚಿತ ತೇವಣಿ ವಿಚಾರವು ಕೆ.ಎಸ್.ಹೆಚ್.ಇ.ಸಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯದ ಅನುಸಾರವಾಗಿದ್ದು, ಕಾಲೇಜು ಮುಚ್ಚುವ ವಿಷಯದ ಬಗ್ಗೆ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕ್ರಮಗಳನ್ನು ಕೈಕೊಳ್ಳಲಾಗುವುದೆಂದು ತಿಳಿಸಿದರು.

**ಸಿಂಡಿಕೇಟ್ ತೀರ್ಮಾನ:**

**ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.**

## 1.6 STATUTE GOVERNING SENIORITY OF TEACHERS OF BENGALURU CENTRAL UNIVERSITY, 2020.

**ಸಿಂಡಿಕೇಟ್ ತೀರ್ಮಾನ:**

**ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.**

**1.7 STATUTES GOVERNING CONSTITUTION, MEETINGS, POWERS AND FUNCTIONS OF VARIOUS AUTHORITIES OF THE BENGALURU CITY UNIVERSITY, 2020.**

## 3.2.(2) Special Meetings ಪುಟ ಸಂಖ್ಯೆ 138

| ಕ್ರಮ ಸಂಖ್ಯೆ | ಇರುವುದು | ಮಾರ್ಪಾಡಿತ |
|---|---|---|
| 3.2 (2) | The Vice-Chancellor may in case of urgency or on a requisition signed by any seven members of the Syndicate to convene a special meeting thereof, Registrar shall convene such special meeting on date to be fixed by the Chairperson. At such a meeting only such subjects as proposed by Vice-Chancellor or as the signatories to requisition have set forth in the requisition shall be brought forward and disposed of | 3.2 (i) The Vice-Chancellor may in case of urgency convene a special meeting thereof, Registrar shall convene such special meeting on date to be fixed by the Chairperson. At such a meeting only such subjects as proposed by Vice-Chancellor be brought forward and disposed of<br>3.2 (ii) The Vice-Chancellor shall on a requisition signed by any seven members of the Syndicate, convene a special meeting thereof. Registrar shall convene such a special meeting on date to be fixed by chairperson. At such meeting only such subjects as proposed by the signatories to the requisition have set forth in the requisition shall be brought forward and disposed of. |

4.2 **(ii): Special Meetings** ಪುಟ ಸಂಖ್ಯೆ 142

| ಕ್ರಮ ಸಂಖ್ಯೆ | ಇರುವುದು | ಸೇರ್ಪಡೆ |
|---|---|---|
| 4.2(ii) | | Special Meetings: The Vice-Chancellor may in case of urgency convene a special meeting thereof, Registrar shall convene such special meeting on date to be fixed by the Chairperson. At such a meeting only such subjects as proposed by Vice-Chancellor be brought forward and disposed of |

8. Works Committee – 8.1(3), ಪುಟ ಸಂಖ್ಯೆ 153

| ಕ್ರಮ ಸಂಖ್ಯೆ | ಇರುವುದು | ಸೇರ್ಪಡೆ |
|---|---|---|
| | One member of the Academic Council, nominated by the Academic Council for a period one year or his nominee | One member of the Academic Council, nominated by the Academic Council for a period one year |

<u>ಸಿಂಡಿಕೇಟ್ ತೀರ್ಮಾನ:</u>

ಸೂಚಿಸಿದ ತಿದ್ದುಪಡಿಗಳೊಂದಿಗೆ ಪರಿನಿಯಮಾವಳಿಗಳಿಗೆ ಅನುಮೋದನೆ ನೀಡಲಾಯಿತು

**1.8 STATUTE GOVERNING HOLDING OF CONVOCATIONS FOR CONFERRING DEGREES, 2020**

ಸಿಂಡಿಕೇಟ್ ತೀರ್ಮಾನ:

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.

**1.9 STATUTE GOVERNING THE INSTITUTION OF ENDOWMENTS FOR AWARD OF GOLD MEDALS, PRIZES, FELLOWSHIPS, SCHOLARSHIPS ENDOWMENT LECTURES AND ACADEMIC CHAIRS, 2020.**

ಸಿಂಡಿಕೇಟ್ ತೀರ್ಮಾನ:

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಲಾಯಿತು.

**1.10 STATUTE GOVERNING AWARD OF HONORARY DEGREES OR ACADEMIC DISTINCTIONS BY BENGALURU CITY UNIVERSITY AT THE ANNUAL CONVOCATIONS, 2020.**

ಸಿಂಡಿಕೇಟ್ ತೀರ್ಮಾನ:

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿದೆ.

**1.11 STATUTES GOVERNING APPOINTMENT, POWERS, FUNCTIONS AND RESPONSIBILTIES OF THE OFFICERS OF THE UNIVERSITY, 2020,**

ಸಿಂಡಿಕೇಟ್ ತೀರ್ಮಾನ:

ಪರಿನಿಯಮಾವಳಿಯನ್ನು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿದೆ.

ಸಭೆಯ ಮುಂದೆ ಮಂಡಿಸಿದ್ದ 11 ಕರಡು ಪರಿನಿಯಮಗಳನ್ನು, ಪರಿಗಣಿಸಿ ಸೂಚಿಸಿದ ತಿದ್ದುಪಡಿಗಳನ್ನು ಅಳವಡಿಸಿಕೊಂಡಂತೆ, ಸಿಂಡಿಕೇಟ್ ಪ್ರಾಧಿಕಾರವು ಅನುಮೋದಿಸಲು ತೀರ್ಮಾನಿಸಿತು.

ನಿಯಮಗಳನ್ನು ಸೇರ್ಪಡಿಸಲು / ಮಾರ್ಪಾಡಿಸಲು ಕಾಯ್ದೆಯಲ್ಲಿ ಇರುವ ಅವಕಾಶಗಳ ಕುರಿತ ಸಂದೇಹಗಳಿಗೆ ಕುಲಪತಿಗಳು ಸ್ಪಷ್ಟೀಕರಣ ನೀಡಿದರು.

ಕರಡು ಪರಿನಿಯಮಾವಳಿ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ಪ್ರೊ. ಬಿ. ತಿಮ್ಮೆಗೌಡ, ನಿವೃತ್ತ ಕುಲಪತಿಗಳು ಹಾಗೂ ಗೌರವಾನ್ವಿತ ಸದಸ್ಯರ ಸಹಾಯ, ಸಹಕಾರ ಹಾಗೂ ಪರಿಶ್ರಮವನ್ನು ಸಭೆಯು ಸರ್ವಾನುಮತದಿಂದ ಪ್ರಶಂಸಿತು.

**2) ಸಾಮಾನ್ಯ ವಿಷಯಗಳ ಚರ್ಚೆ**

ಡಾ. ಆರ್. ಪಾರ್ವತಿ ಮತ್ತು ಡಾ. ಹೆಚ್.ಟಿ ಅರವಿಂದ್‌ರವರು ಕೆಲವು ವಿಷಯಗಳ ಬಗ್ಗೆ ಸಭೆಯ ಗಮನ ಸೆಳೆಯುತ್ತಾ ಅತ್ಯಂತ ಜರೂರಾಗಿ ಚರ್ಚಿಸಬೇಕೆಂದು ಅಧ್ಯಕ್ಷರ ಅನುಮತಿಯನ್ನು ಕೋರಿದರು. ಅಧ್ಯಕ್ಷರು ಕೆಳಕಂಡ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿಲು ಅವಕಾಶ ನೀಡಿದರು.

1. Constitution of LIC
2. Guest Faculty Appointment
3. 43rd Indian Social Science Congress
4. Examination Management Systems
5. Issue relating to Prof. Munninarayanappa, Dept. of Commerce

1. Constitution of LIC

ಈ ಹಿಂದೆ ಅನುಮೋದನೆ ಪಡೆದ ಹಿನ್ನೆಲೆಯಲ್ಲಿ 12+2= 13 ಸ್ಥಳೀಯ ಪರಿವೀಕ್ಷಣ ಸಮಿತಿಗಳನ್ನು, ಪದ ನಿಮಿತ್ತ ಸದಸ್ಯರನ್ನೊಳಗೊಂಡು ರಚಿಸಲಾಗಿದೆ. ಆದರೆ ಸದಸ್ಯರು, ಪದ ನಿಮಿತ್ತ ಸದಸ್ಯರ ಅಧ್ಯಕ್ಷತೆಯುಳ್ಳ ಸಮಿತಿಗಳ ಬದಲು ಡೀನ್‌ಗಳ ನೇತೃತ್ವದ ಸಮಿತಿಗಳನ್ನು ರಚಿಸುವಂತೆ ಸಲಹೆ ನೀಡಿದರು ಸಮಿತಿಗಳಿಗೆ ತಾಂತ್ರಿಕ ಸಹಕಾರವನ್ನು ಸಂಪೂರ್ಣವಾಗಿ ಒದಗಿಸಲಾಗುವುದು ಸ್ಕೋರ್‌ಗಳನ್ನು ಅಪ್‌ಲೋಡ್ ಮಾಡುವಾಗ ಎದುರಿಸಬೇಕಾದ ಸಮಸ್ಯೆಗಳಿಗೆ ಸಮಜಾಯಿಶಿ ನೀಡಿದ್ದು, ಈ ಹಿಂದೆ ಏರ್ಪಡಿಸಿದಂತೆ ಮತ್ತೊಮ್ಮೆ Orientation Programme ಅನ್ನು ದಿನಾಂಕ 1.10.2020 ರಂದು ನಡೆಸಲಾಗುವುದು.

**ಸಿಂಡಿಕೇಟ್ ತೀರ್ಮಾನ:**

ಹಿಂದಿನ ಸಭೆಯ ನಿರ್ಣಯದ ನಂತರ ಪ್ರೊ. ವಿ. ಆರ್. ದೇವರಾಜ್ ಮತ್ತು ಪ್ರೊ. ಪಾಂಡುರಂಗಪ್ಪ ರವರ ನೇತೃತ್ವದ ಸಮಿತಿಗಳನ್ನು ರಚಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ಪದನಿಮಿತ್ತ ಸದಸ್ಯರ ಅಧ್ಯಕ್ಷತೆಯ ಬದಲು ಡೀನ್‌ರ ಅಧ್ಯಕ್ಷತೆಯಲ್ಲಿ ಎರಡು ಸಮಿತಿಗಳನ್ನು ರಚಿಸಲು ಒಪ್ಪಿಗೆ ನೀಡಿತು.

2. Guest Faculty Appointment

**ಸಿಂಡಿಕೇಟ್ ತೀರ್ಮಾನ:**

ಕುಲಪತಿಗಳು ನೀಡಿದ ಮಾಹಿತಿಯನ್ನು ಗಮನಿಸಿ, ಸಭೆಯನ್ನು Guest Faculty ನೇಮಕಾತಿಯನ್ನು ಮುಂದಿನ 10 ದಿನಗಳೊಳಗೆ ಸಂಪೂರ್ಣಗೊಳಿಸಲು ಸೂಚಿಸಿತು.

3. 43rd Indian Social Science Congress

ಸದಸ್ಯರಾದ ಡಾ. ಹೆಚ್.ಟಿ. ಅರವಿಂದ್ ರವರು ಈ ವಿಷಯದ ಬಗ್ಗೆ ತೆಗೆದುಕೊಂಡ ನಿರ್ಧಾರಗಳ ಅನುಷ್ಠಾನದಲ್ಲಿ ವಿಳಂಬದ ಬಗ್ಗೆ ಸಭೆಯ ಗಮನ ಸಳೆದರು ಇತರ ಕೆಲವು ಸದಸ್ಯರು ಕೂಡಾ ತಮ್ಮ ಆಕ್ಷೇಪಗಳನ್ನು ವ್ಯಕ್ತಪಡಿಸಿದರು.

ಸದಸ್ಯರ ಆಕ್ಷೇಪಗಳನ್ನು ಗಮನಿಸುತ್ತಾ ಅನಿವಾರ್ಯವಾದ ಆಡಳಿತಾತ್ಮಕ ವಿಳಂಬವನ್ನು ಒಪ್ಪಿಕೊಂಡು ಕುಲಪತಿಗಳು ಸ್ಪಷ್ಟೀಕರಣ ನೀಡಿದರು.

**ಸಿಂಡಿಕೇಟ್ ತೀರ್ಮಾನ:**

ಸದರಿ ವಿಷಯದ ಬಗ್ಗೆ ಅತಿ ಶೀಘ್ರವಾಗಿ ಮಂದಿನ ಕ್ರಮಕೈಕೊಳ್ಳಲು ವಿಶ್ವವಿದ್ಯಾಲಯಕ್ಕೆ ಸೂಚಿಸಲಾಯಿತು

ಈಗಾಗಲೇ 29.08.2020 ರಂದು ಸಿಂಡಿಕೇಟ್ ಸಭೆಯು ತೆಗೆದುಕೊಂಡ ತೀರ್ಮಾನಗಳನ್ನು 30 ದಿನಗಳು ಕಳೆದರೂ ಅನುಷ್ಠಾನಗೊಳಿಸಲು ಸಾಧ್ಯವಾಗದ ವಸ್ತು ಸ್ಥಿತಿಯನ್ನು ಗಮನಿಸಿದ ಸಭೆಯು, ಕುಲಪತಿಗಳು ನೀಡಿದ ಆಶ್ವಾಸನೆಯನ್ನು ಗಮನಿಸಿ ಅದರ ಪಾಲನೆಯನ್ನು ಮುಂದಿನ 10 ದಿನಗಳೊಳಗೆ ಮಾಡಬೇಕೆಂದು ಸೂಚಿಸಿತು.

4. Examination Management Systems

ಕುಲಸಚಿವರು(ಮೌಲ್ಯಮಾಪನ) ರವರು, ಈ ವಿಷಯದ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ವಿವರಗಳನ್ನು ಸಭೆಯ ಗಮನಕ್ಕೆ ಮಂಡಿಸಿದರು.

**ಸಿಂಡಿಕೇಟ್ ತೀರ್ಮಾನ:**

ಸದರಿ ವಿಷಯದ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನು ಸಭೆಯು ಗಮನಿಸಿತು.

5. Issue relating to Prof. Munninarayanappa, Dept. of Commerce

ಮಾನ್ಯ ಸದಸ್ಯರಾದ ಡಾ. ಆರ್. ಪಾರ್ವತಿಯವರು ಈ ವಿಷಯದ ಬಗ್ಗೆ ವಿವರಗಳನ್ನು ತಿಳಿಸಿ, ಈಗಾಗಲೇ ತೆಗೆದುಕೊಂಡಿರುವ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಅನುಷ್ಠಾನ ಮಾಡಬೇಕೆಂದು ಆಗ್ರಹಿಸಿದರು. ಈ ವಿಷಯದ ಬಗ್ಗೆ ನಡೆದ ಚರ್ಚೆಯಲ್ಲಿ ಸದಸ್ಯರುಗಳಾದ ಶ್ರೀ ಕರಣ್ ಕುಮಾರ್, ಡಾ. ಹೆಚ್. ಟಿ ಅರವಿಂದ್, ಡಾ. ಬಿ. ಎ. ಅನುರಾಧಾ, ಡಾ. ಇ.ಬಿ. ರಾಜೇಶ್, ಶ್ರೀಮತಿ ಜ್ಯೋತಿ ವಿಜಯ್, ಡಾ. ಆರ್. ಕೆ. ಚಂದ್ರನಾಥ್ ಮತ್ತಿತರು ಭಾಗವಹಿಸಿದರು.

**ಸಿಂಡಿಕೇಟ್ ತೀರ್ಮಾನ:**

ದಿನಾಂಕ 11.09.2020 ರಂದು ಜರುಗಿದ 8ನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ಸ್ಥಿರೀಕರಣವಾದ ಮೇಲೆ ಸಂಬಂಧಿಸಿದವರಿಗೆ ಕಾರಣ ಕೇಳುವ ನೋಟೀಸನ್ನು ನೀಡಿ ಅವರಿಂದ ಬರಬಹುದಾದ ಸಮಜಾಯಿಶಿಯನ್ನು ಸಭೆಯ ಮುಂದೆ ಮಂಡಿಸಲಾಗುವುದೆಂದು ಕುಲಪತಿಗಳು ಸ್ಪಷ್ಟೀಕರಣ ನೀಡಿದರು.

ಕುಲಸಚಿವರು ಸಭಾಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನಾರ್ಪಣೆ ಅರ್ಪಿಸಿದನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು

ಸಹಿ/_ 
**ಕುಲಸಚಿವರು**

ಸಹಿ/_ 
**ಕುಲಪತಿಗಳು**

[signature] 12/10/2020
**ಕುಲಸಚಿವರು**
**ಸದಸ್ಯ ಕಾರ್ಯದರ್ಶಿಗಳು**